**OS 5/2016** **PW-4**

**ಸಾಕ್ಷಿಗೆ ದಿನಾಂಕ 03-07-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಜೆ.ಆರ್.ಕೆ. ವಕೀಲರಿಂದ**

ನಾನು ನನ್ನ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯ ಮತ್ತು ನಿಜ ಇರುತ್ತದೆ ಆದ್ದರಿಂದ ಸದರಿ ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಪ್ರಾರ್ಥಿಸುತ್ತೇನೆ.

1ನೇ ವಾದಿಯು ನನಗೆ ನೀಡಿದ ಎಸ್.ಪಿ.ಎ. ಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈಗ ಗುರುತಿಸಿದ ಎಸ್.ಪಿ.ಎ. ಯನ್ನು ನಿಶಾನೆ ಪಿ-8 ಎಂದು ಗುರುತಿಸಲಾಯಿತು. ಈ ಮೊದಲು ಪಿ.ಡಬ್ಲ್ಯೂ -1ರವರ ಮುಖಾಂತರ ನಿಶಾನೆ ಪಿ-1 ರಿಂದ 7 ದಾಖಲೆಗಳನ್ನು ಗುರುತಿಸಲಾಗಿದ್ದು, ಅವರ ಅನಾರೋಗ್ಯದ ಕಾರಣ, ಪಾಟೀ ಸವಾಲಿಗೆ ಹಾಜರಾಗಿಲ್ಲ, ಮತ್ತು ನನಗೆ ಎಸ್.ಪಿ.ಎ. ನೀಡಿದ ಕಾರಣ ಅವರ ಪರವಾಗಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ. ಸಾಕ್ಷಿಯು ನಿಶಾನೆ ಪಿ-1 ರಿಂದ 7 ದಾಖಲೆಗಳನ್ನು ನೋಡಿ ತಮ್ಮ ಸಾಕ್ಷ್ಯಕ್ಕೆ ಅಳವಡಿಸಿಕೊಳ್ಳುತ್ತಾರೆ.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ.ಡಿ. ವಕೀಲರಿಂದ**

ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.